**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**<u>ಅಪರಾಧ ಪ್ರಕರಣ ಸಂಖ್ಯೆಃ 59/2019</u>**

| | | |
|---|---|---|
| **ಸಾಕ್ಷಿಯ ಹೆಸರು** | ದೇವಯ್ಯ ಜಿ ಬಿನ್ ಲೇಟ್ ಮಾಳಿಗಯ್ಯ | ಚಾಸಾ- 8 |
| **ಉದ್ಯೋಗ** | ಹೆಚ್ ಸಿ , ಹೆಚ್ ಎನ್ ಪುರ ಪೋ ಠಾಣೆ | ಪ್ರಾಸಾ- 6 |
| **ವಾಸ ಸ್ಥಳ** | ಹೆಚ್ ಎನ್ ಪುರ | |
| **ದಿನಾಂಕಃ 22.01.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆ</u>** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ.

ನಾನು 2013 ರಿಂದ 2021 ರವರೆಗೆ ಅರಕಲಗೂಡು ಪೋಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.11.2018 ರಂದು ಎಸ್ ಹೆಚ್ ಒ ಪ್ರಭಾರದಲ್ಲಿದ್ದಾಗ ರೇವಮ್ಮ ರವರು ಠಾಣೆಗೆ ಹಾಜರಾಗಿ ಆಕೆ ಮೇಲೆ ಹಲ್ಲೆ ಆಗಿರುವ ಬಗ್ಗೆ ದೂರನ್ನು ನೀಡಿದ್ದು ನಾನು ದೂರನ್ನು ಸ್ವೀಕರಿಸಿ ಮೊ ನಂ. 374/18 ಕಲಂ 323, 324, 504, 506, 354 , 448ಸಹವಾಚಕ 149 ರ ರೀತ್ಯಾ ಪ್ರಕರಣ ದಾಖಲಿಸಿ ನ್ಯಾಯಾಲಕ್ಕೆ ಮತ್ತು ಮೇಲಾದಿಕಾರಿಗಳಿಗೆ ಪ್ರ ವ ವನ್ನು ನಿವೇದಿಸಿಕೊಂಡಿರುತ್ತೇನೆ.

ದಿಃ 09.11.18 ರಂದು ಸ್ಥಳಕ್ಕೆ ಹೋಗಿ ಪಂಚರನ್ನು ಬರ ಮಾಡಿಕೊಂಡು ಮತ್ತು ಚಾಸಾ 1 ರವರು ಸಹಾ ಅಲ್ಲಿ ಹಾಜರಿದ್ದು ಚಾಸಾ 1 ರವರು ಅವರ ಮನೆ ತೋರಿಸಿದ್ದು ಅವರ ಬಾವನವರು ವಿದ್ಯುತ್ ಕಂಬಕ್ಕೆ ಬಲ್ಬ್ ಹಾಕಿಲ್ಲ ಎಂಬ ವಿಚಾರವನ್ನು 1ನೇ ಆರೋಪಿಗೆ ಕೇಳಿದಾಗ ಆರೋಪಿಯು ಚಾಸಾ 1 ರವರಿಗೆ ನೀನು ವಿದ್ಯುತ್ ಬಿಲ್ಲನ್ನು ಪಾವತಿ ಮಾಡುತ್ತೀಯಾ ಎಂದು ಹೇಳಿ ಬೈದಿರುತ್ತಾರೆ. 4ನೇ ಆರೋಪಿ ಮತ್ತು ಮಕ್ಕಳು ಚಾಸಾ 1 ರವರಿಗೆ ಹಲ್ಲೆ ಮಾಡಿರುವುದಾಗಿ ಹೇಳಿದರು. ಸ್ಥಳ ಮಹಜರ್ ಕಾಲಕ್ಕೆ ಚಾಸಾ 1 ರವರು ಒಂದು ದೊಣ್ಣೆಯನ್ನು ಪಂಚರ ಸಮಕ್ಷಮ ಹಾಜರುಪಡಿಸಿದ್ದು ಸದರಿ ದೊಣ್ಣೆಯಿಂದ 1ನೇ ಆರೋಪಿ ನನಗೆ ಹಲ್ಲೆ ಮಾಡಿರುವುದಾಗಿ ತಿಳಿಸಿದರು. ಮತ್ತು ಪಂಚರ ಸಮಕ್ಷಮ ನಾನು ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ನ್ನು ಬೆ. 10 ರಿಂದ 11 ಗಂಟೆ ವರೆಗೆ ಮಾಡಿರುತ್ತೇನೆ. ಠಾಣೆಗೆ ಹಿಂದಿರುಗಿಸಿ ಸ್ವತ್ತಿನ ಪಟ್ಟಿ ತಯಾರಿಸಿ ನ್ಯಾ.ಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗಳ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಅಂದರೆ ದಿಃ 09.11.18 ರಂದು ಮತ್ತೊಂದು ಮಹಜರ್ ನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿರುತ್ತೇನೆ. 5ನೇ ಆರೋಪಿಯು ಚಾಸಾ 1 ರವರು ಅರಕಲಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ವೇಳೆ ಬೆದರಿಕೆ ಹಾಕಿರುವುದಾಗಿ ಚಾಸಾ 1 ರವರು ಹೇಳಿದ್ದರಿಂದ ಆ ದಿನ ಅರಕಲಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಮ 12 ರಿಂದ 1 ಗಂಟೆ ಸಮಯದಲ್ಲಿ ಮಹಜರ್

ಕ್ರಮ ಜರುಗಿಸಿರುತ್ತೇನೆ. ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಮತ್ತು ಚಾಸಾ 1 ರವರ ವಾಸದ ಮನೆಯ ಖಾತಾ ವಹಿ ಪಡೆದು ಕಡತಕ್ಕೆ ಸೇರಿಸಿರುತ್ತೇನೆ. ನಂತರ ಆರೋಪಿಗಳ ವಿರುದ್ದ ಆರೋಪವು ಸಾಬೀತಾದ ಕಾರಣ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

ನಿಪಿ1 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ1ಬಿ ಎಂದು ಗುರುತಿಸಲಾಯಿತು. ದಿಃ 08-11-18 ರಂದು ಮೊ ನಂ. 374/18 ರೀತ್ಯಾ ಪ್ರಕರಣ ದಾಖಲಿಸಿದ ಪ್ರವವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು ಸಾಕ್ಷಿಯ ಸಹಿಯನ್ನು ನಿಪಿ 6ಎ ಎಂದು ಗುರುತಿಸಲಾಯಿತು. ನಿಪಿ2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ2ಡಿ ಎಂದು ಗುರುತಿಸಲಾಯಿತು. ನಿಪಿ3 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ3ಡಿ ಎಂದು ಗುರುತಿಸಲಾಯಿತು. ದಿ 09-01-18 ರಂದು ತಯಾರಿಸಿದ ಪಿ ಎಫ್ ನಂ. 132/18 ರಲ್ಲಿ ತನ್ನ ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಸಾಕ್ಷಿಯ ಸಹಿಯನ್ನು ನಿಪಿ 7ಎ ಎಂದು ಗುರುತಿಸಲಾಯಿತು. ನಿಪಿ4 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ4 ಎ ಎಂದು ಗುರುತಿಸಲಾಯಿತು. ದಿಃ 30.11.18 ರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಸಾಕ್ಷಿಯ ಸಹಿಯನ್ನು ನಿಪಿ8ಎ ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ</u>** ಆರೋಪಿಗಳ ಪರ **ಶ್ರೀ.** ಎಂ ಎನ್ ಆರ್ ವಕೀಲರಿಂದ:

ಘಟನೆಯು ದಿಃ 06.11.18 ರಂದು ಆಗಿರುತ್ತದೆ. ಚಾಸಾ 1 ರವರು ದೂರನ್ನು ದಿಃ 08.11.18 ರಂದು ನೀಡಿರುತ್ತಾರೆ. ಚಾಸಾ 1 ಮತ್ತು ಆರೋಪಿತರು ಅಣ್ಣ ತಮ್ಮಂದಿರಾಗಬೇಕು. ಮತ್ತು ಅವರುಗಳ ನಡುವೆ ಒಂದು ಸಿವಿಲ್ ವ್ಯಾಜ್ಯ ಇತ್ತು ಎಂದರೆ ಸರಿ. ಆದಕಾರಣ ಚಾಸಾ 1 ಮತ್ತು ಆರೋಪಿಗಳ ನಡುವೆ ವೈಮನಸ್ಸು ಇತ್ತು ಎಂದರೆ ನನಗೆ ತಿಳಿದಿಲ್ಲ. ಚಾಸಾ 1 ಮತ್ತು ಆರೋಪಿಗಳ ನಡುವೆ ಯಾವುದೇ ಗಲಾಟೆ ಆಗದಿದ್ದರೂ ಚಾಸಾ 1 ರವರು ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1 ರವರು ನೀಡಿದ ಸುಳ್ಳು ದೂರಿನ ಮೇಲೆ ನಾನು ಸರಿಯಾದ ತನಿಖೆ ಮಾಡದೆ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 3 ರ ಪಂಚರಿಗೆ ನಾನು ನೋಟೀಸ್ ನೀಡಿಲ್ಲ. ಪಂಚರು ಸ್ಥಳದಲ್ಲಿದ್ದು ನಾವು ಅವರಿಗೆ ವಿಷಯ ಹೇಳಿದ್ದು ಅವರು ಬಂದಿರುತ್ತಾರೆ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಮಹಜರ್ ಕ್ರಮ ಜರುಗಿಸಿರುವುದಿಲ್ಲ ಆದರೂ ಠಾಣೆಯಲ್ಲಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ಸಾಕ್ಷಿಗಳು ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿಗಳ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

5ನೇ ಆರೋಪಿ ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಾಸಾ 1 ರವರಿಗೆ ಬೆದರಿಸಿರುವುದಿಲ್ಲ ಎಂದರೆ ಸರಿಯಲ್ಲ. 5ನೇ ಆರೋಪಿ ಒಂದು ವೇಳೆ ಸದರಿ ರೀತಿ ಬೆದರಿಸಿದರೆ ಆ ಘಟನೆಯೇ ಪ್ರತ್ಯೇಕ ಅಪರಾದವಾಗಿದ್ದು ಪ್ರತ್ಯೇಕ ಪ್ರ ವ ವ ದಾಖಲಿಸಿ ತನಿಖೆ ಮಾಡಬೇಕೆಂದರೆ ಸಾಕ್ಷಿಯು ಚಾಸಾ 1 ರವರು ಸದರಿ ಘಟನೆ ಬಗ್ಗೆ ದೂರಿನಲ್ಲಿ ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ಘಟನೆಯ ಬಗ್ಗೆ ಚಾಸಾ 1 ರವರನ್ನು ಹೊರತುಪಡಿಸಿ ನಾನು ಚಾಸಾ 2 ಹಾಗೂ ಚಾಸಾ 1 ರ ಗಂಡ ಈರೇಗೌಡ ರವರನ್ನು ವಿಚಾರಣೆ ಮಾಡಿರುತ್ತೇನೆ. ಚಾಸಾ 1 ರವರ ಕುಟುಂಬದವರನ್ನು ಹೊರತುಪಡಿಸಿ ಬೇರೆ ಯಾರನ್ನು ಆಸ್ಪತ್ರೆಯಲ್ಲಿ ಆದ ಘಟನೆ ಬಗ್ಗೆ ವಿಚಾರಣೆ ಮಾಡಿಲ್ಲ. ಚಾಸಾ 1 ರವರು 5ನೇ ಆರೋಪಿ ವಿರುದ್ದ ನೀಡಿದ ಸುಳ್ಳು ದೂರಿನ ಮೇರೆಗೆ ಸುಳ್ಳು ಪ್ರ ವ ವ ಮತ್ತು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನೈಗೆರೆ ಗ್ರಾಮ ಪಂಚಾಯ್ತಿಗೆ ಚಾಸಾ 1 ರವರ ಮನೆಯ ಖಾತಾ ವಹಿ ಕೋರಿ ನೋಟೀಸ್ ನೀಡಿದ್ದೆ ಸದರಿ ನೋಟೀಸ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ನೈಗೆರೆ ಗ್ರಾಮ ಪಂಚಾಯ್ತಿಗೆ ಯಾವುದೇ ನೋಟೀಸ್ ನೀಡದಿದ್ದರೂ ಮತ್ತು ಚಾಸಾ 1 ರವರು ಹಾಜರುಪಡಿಸಿದ ಖಾತಾ ವಹಿಯನ್ನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗು , ಚಾಸಾ 1 ರವರಿಗು ಹಾಗೂ ನಿಪಿ 4 ರಲ್ಲಿರುವ ದಾಖಲಾತಿಗು ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

ಎಂ ಒ 1 ನ್ನು ಚಾಸಾ 1 ರವರು ನೀಡಿರುತ್ತಾರೆ. ಎಂ ಒ 1 ಕ್ಕೂ ಆರೋಪಿಗಳಿಗು ಯಾವುದೇ ಸಂಬಂಧ ಇರದಿದ್ದರೂ ಚಾಸಾ 1 ರವರು ಎಂ ಒ 1 ನ್ನು ಸೃಷ್ಟಿಸಿ ನಮಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಎಂ ಒ 1 ನ್ನು ನಾನು ಅಮಾನತ್ತು ಮಹಜರ್ ಕಾಲಕ್ಕೆ ಅಮಾನತ್ತು ಪಡಿಸಿಕೊಂಡಿಲ್ಲ ಆದರೆ ಅದನ್ನು ಪೋಲೀಸ್ ಠಾಣೆಯಲ್ಲಿ ಚಾಸಾ 1 ರವರ ಜೊತೆ ಷರೀಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನೀಡಿದ ಸುಳ್ಳು ದೂರಿನ ಮೇರೆಗೆ ನಾನು ಸರಿಯಾಗಿ ತನಿಖೆ ಮಾಡದೆ ಆರೋಪಿಗಳು ಯಾವುದೇ ತಪ್ಪೂ ಮಾಡದೇ ಇದ್ದರೂ ಅವರ ವಿರುದ್ದ ಸುಳ್ಳು ದೋಷರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇ ರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ. ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಧೀಶರು,**
**ಅರಕಲಗೂಡು.**